# ಶಿಕ್ಷೆ ಎಂಬ ಶಿಕ್ಷಣಕ್ಕೆ ಕೊನೆ ಎಂದು?

**ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕಲಿತರೆ ಮಾತ್ರವೇ ಉದ್ಧಾರ ಎಂಬ ಮನೋಭಾವ ಗ್ರಾಮೀಣ ಭಾಗಗಳಿಗೂ ಹರಡಿದೆ. ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿಯೇ ಕಲಿಸಬೇಕು ಎಂಬ ಹೆತ್ತವರ ಧೋರಣೆಯನ್ನು ಲೌಕಿಕ ಲಾಭಕ್ಕಾಗಿ ಪರಿವರ್ತಿಸಿಕೊಂಡಿರುವ ಖಾಸಗಿ ಶಾಲೆಗಳು ಸುಲಿಯುವುದಕ್ಕೆ ಗಡಿಮಿತಿ ಇಲ್ಲ. ಅದರಲ್ಲಿಯೂ ಕೇಂದ್ರೀಯ ಪಠ್ಯಕ್ರಮದ ನೆಪ ಒಡ್ಡಿ ತಾವು ಸರ್ವ ಸ್ವತಂತ್ರರೆಂದು ಭಾವಿಸಿಕೊಂಡ ಖಾಸಗಿ ಶಾಲೆಗಳ ಒಡೆಯರು ಯಾವ ಸೂತ್ರಕ್ಕೂ ಒಳಪಡದಂತೆ ತಮ್ಮ ಶುಲ್ಕ ಪದ್ಧತಿಯನ್ನು ರೂಪಿಸಿರುವುದುಂಟು. ಅದಕ್ಕೀಗ ಹೈಕೋರ್ಟ್ ತಡೆ ಒಡ್ಡಿದೆ.**

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಎರಡು ಸಂಗತಿಗಳು ಈಚೆಗೆ ಸಾರ್ವಜನಿಕರ ಗಮನ ಸೆಳೆದಿವೆ. ರಾಜಧಾನಿಯಿಂದ ನಾಲ್ಕುನೂರು ಕಿಲೋಮೀಟರ್‌ಗೂ ಹೆಚ್ಚು ದೂರ ಇರುವ ಹೊನ್ನಾವರದ ಖಾಸಗಿ ಶಾಲೆಯಲ್ಲಿ ಎಂಟನೇ ತರಗತಿಯ ಬಾಲಕನೊಬ್ಬ ದೈಹಿಕ ಶಿಕ್ಷೆಗೆ ಒಳಗಾಗಿ ಮೃತಪಟ್ಟ ಘಟನೆ ಮೊದಲನೆಯದ್ದು. ಇದು ಶಾಲೆಗಳಲ್ಲಿ ಮಕ್ಕಳು ಸುರಕ್ಷಿತವಲ್ಲ ಎಂಬ ಭಾವನೆಯನ್ನು ಮೂಡಿಸಿದೆ. ಬೆಂಗಳೂರಿನ ಖಾಸಗಿ ಶಾಲೆಗಳು ಕೇಂದ್ರೀಯ (ಸಿಬಿಎಸ್‌ಇ ಮತ್ತು ಐಸಿಎಸ್‌ಇ) ಪಠ್ಯಕ್ರಮಗಳನ್ನು ಬೋಧಿಸುವ ನೆಪದಲ್ಲಿ ಅತ್ಯಧಿಕ ಶುಲ್ಕ ವಿಧಿಸಿ ಪೋಷಕರನ್ನು ಸುಲಿಯುತ್ತಿರುವುದಕ್ಕೆ ಹೈಕೋರ್ಟ್ ಕಡಿವಾಣ ಹಾಕಿರುವ ಇನ್ನೊಂದು ಘಟನೆ, ಹೆಚ್ಚಿನ ಹೆತ್ತವರಲ್ಲಿ ಸಮಾಧಾನ ಮಾಡಿಸಿದ ಬೆಳವಣಿಗೆ.

ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಕಲಿಕೆಯ ವಿಧಾನ ಕುರಿತಂತೆ ಸುಧಾರಣೆಗಳು ನಡೆಯುತ್ತಲೇ ಇವೆ. ಉತ್ತೀರ್ಣತೆ, ಅನುತ್ತೀರ್ಣತೆಗಳು ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದನ್ನು ಮನಗಂಡ ತಜ್ಞರು ಸೋಲು– ಗೆಲುವಿನ ಪರಿವೆ ಇಲ್ಲದೆ ಆಸಕ್ತಿ, ಪ್ರೀತಿಯಿಂದ ಕಲಿಕೆಯನ್ನು ಮುಂದುವರಿಸುವ ವಾತಾವರಣ ಇರಬೇಕೆಂದು ಮಾಡಿರುವ ಸಲಹೆ ಅನುಷ್ಠಾನದಲ್ಲಿದೆ. ಮಕ್ಕಳು ಕಷ್ಟಪಟ್ಟು ಕಲಿಯುವಂತಿರಬಾರದು; ಇಷ್ಟಪಟ್ಟು ಕಲಿಯಬೇಕು ಎಂಬುದು ಪ್ರಾಥಮಿಕ ಹಂತದ ಕಲಿಕೆಯ ವಿಧಾನದಲ್ಲಿ ಸೇರಿದೆ. ದೈಹಿಕ ಶಿಕ್ಷೆಯಿರಲಿ, ಮಾನಸಿಕವಾಗಿಯೂ ಮಕ್ಕಳ ಮನಸ್ಸು ಕುಗ್ಗುವಂತೆ ಶಿಕ್ಷಕರ ವರ್ತನೆ ಇರಬಾರದು ಎಂಬ ಆದರ್ಶವೂ ಇದೆ. ಆದರೆ ಶಿಕ್ಷೆಯ ಭಯ ಇಲ್ಲದಿದ್ದರೆ ಮಕ್ಕಳು ಕಲಿಯುವುದಿಲ್ಲ; ಅವರನ್ನು ನಿರಂಕುಶ ರೀತಿಯಲ್ಲಿ ವರ್ತಿಸಲು ಬಿಟ್ಟರೆ ಕೆಟ್ಟು ಹಾಳಾಗಿ ಹೋಗುತ್ತಾರೆ ಎಂದು ಯೋಚಿಸುವವರಿಗೂ ಕೊರತೆ ಇಲ್ಲ. ಮನೆಯ ಆಪ್ತವಲಯವನ್ನು ದಾಟಿ ಸಮುದಾಯದಲ್ಲಿ ತನ್ನ ವಾರಿಗೆಯ ಮಕ್ಕಳನ್ನು ಸೇರಿಕೊಳ್ಳುವ ಮಗು ಕೆಲವು ನಿಯಮಗಳಿಗೆ ಒಗ್ಗಿಕೊಳ್ಳುವ ಶಿಸ್ತನ್ನು ರೂಢಿಸಿಕೊಳ್ಳಬೇಕು ಎಂಬುದೇ ಶಿಕ್ಷೆಗೆ ಆಹ್ವಾನ ನೀಡುವ ಅಂಶ. ಅದು ವಿವೇಚನೆಯನ್ನು ಮೀರಿದರೆ ಅಪಾಯಕಾರಿ ಎಂಬುದಕ್ಕೆ ಹೊನ್ನಾವರದ ಖಾಸಗಿ ಶಾಲೆಯ ದುರಂತ ಒಂದು ನಿದರ್ಶನ. ತರಗತಿಗೆ ಗೈರು ಹಾಜರಾದ ಕಾರಣಕ್ಕೆ ಶಾಲಾ ಮೈದಾನವನ್ನು ಸುತ್ತು ಹಾಕುವ ಶಿಕ್ಷೆ ವಿಧಿಸಿದ್ದು ಸಾಮಾನ್ಯ ಸಂದರ್ಭದಲ್ಲಿ ಸಹಜವೆನ್ನಿಸಿದರೂ ಅದು ವಿದ್ಯಾರ್ಥಿಯ ದಾರುಣ ಅಂತ್ಯದಲ್ಲಿ ಕೊನೆಗೊಂಡಾಗ ಇಂಥ ವಿಧಾನಗಳಿಗೆ ಇತಿಶ್ರೀ ಹಾಡಲೇಬೇಕಾಗುತ್ತದೆ. ಅದು ಖಾಸಗಿ ಶಾಲೆಯಲ್ಲಿ ನಡೆದ ಘಟನೆಯೆಂದು ಶಿಕ್ಷಣ ಸಚಿವರು ಕೈ ತೊಳೆದುಕೊಳ್ಳುವಂತಿಲ್ಲ. ಇನ್ನು ಮುಂದೆ ಇಂಥ ದುರ್ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕಾನೂನು ಕ್ರಮಕೈಗೊಳ್ಳಬೇಕಾದ ಉತ್ತರದಾಯಿತ್ವ ಶಿಕ್ಷಣ ಇಲಾಖೆಯದು.

ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕಲಿತರೆ ಮಾತ್ರವೇ ಉದ್ಧಾರ ಎಂಬುದು ಈಗ ಕೇವಲ ನಗರ ಪ್ರದೇಶಗಳಿಗೆ ಸೀಮಿತವಾದ ಮನೋಭಾವವಲ್ಲ. ಗ್ರಾಮೀಣ ಭಾಗಗಳಿಗೂ ಹರಡಿದ ಪ್ರವೃತ್ತಿ. ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಆರಂಭಿಸಲು ಸರ್ಕಾರಿ ಶಾಲೆಗಳಲ್ಲಿಯೇ ವ್ಯವಸ್ಥೆ ಕಲ್ಪಿಸಿದ್ದರೂ ಅದು ಈ ಮನೋಭಾವವನ್ನು ಬದಲಿಸುವಷ್ಟು ಶಕ್ತವಾಗಿಲ್ಲ. ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿಯೇ ಕಲಿಸಬೇಕು ಎಂಬ ಹೆತ್ತವರ ಧೋರಣೆಯನ್ನು ಲೌಕಿಕ ಲಾಭಕ್ಕಾಗಿ ಪರಿವರ್ತಿಸಿಕೊಂಡಿರುವ ಖಾಸಗಿ ಶಾಲೆಗಳು ನಗರವಾಸಿಗಳನ್ನು ಸುಲಿಯುವುದಕ್ಕೆ ಗಡಿಮಿತಿ ಇಲ್ಲ. ಅದರಲ್ಲಿಯೂ ಕೇಂದ್ರೀಯ ಪಠ್ಯಕ್ರಮದ ನೆಪ ಒಡ್ಡಿ ತಾವು ಸರ್ವ ಸ್ವತಂತ್ರರೆಂದು ಭಾವಿಸಿಕೊಂಡ ಖಾಸಗಿ ಶಾಲೆಗಳ ಒಡೆಯರು ಯಾವ ಸೂತ್ರಕ್ಕೂ ಒಳಪಡದಂತೆ ತಮ್ಮ ಶುಲ್ಕ ಪದ್ಧತಿಯನ್ನು ರೂಪಿಸಿರುವುದುಂಟು. ಅದಕ್ಕೀಗ ಹೈಕೋರ್ಟ್ ತಡೆ ಒಡ್ಡಿದೆ. 1998ರ ಕರ್ನಾಟಕ ಶಿಕ್ಷಣ ಕಾಯ್ದೆಗೆ 1(3–ಎ) ಕಲಂ ಸೇರಿಸಿದ್ದ ತಿದ್ದುಪಡಿಯ ದುರ್ಲಾಭ ಪಡೆದು ಖಾಸಗಿ ಶಾಲೆಗಳು ಮನಸ್ಸಿಗೆ ಬಂದಂತೆ ಶುಲ್ಕ ವಿಧಿಸುತ್ತಿದ್ದ ಕ್ರಮ ಸಂವಿಧಾನಬಾಹಿರ ಎಂದು ತೀರ್ಪು ನೀಡುವ ಮೂಲಕ ಶಿಕ್ಷಣದಲ್ಲಿನ ಸಮಾನತೆಯ ಅಂಶವನ್ನು ಎತ್ತಿಹಿಡಿದಂತಾಗಿದೆ. ಹಾಗಾಗಿ ಶಾಲೆಗಳ ಆಡಳಿತ ವರ್ಗ ಇನ್ನು ಮುಂದೆ ಕರ್ನಾಟಕದ ಶಿಕ್ಷಣ ಕಾಯ್ದೆಗೆ ಅನುಗುಣವಾಗಿ ಮತ್ತು ಅದರ ನಿಯಮಾವಳಿಗೆ ತಕ್ಕಂತೆ ಶಿಕ್ಷಣ ನೀತಿಯನ್ನು ಅನುಸರಿಸಬೇಕಿದೆ. ಹೀಗೆ ಮಾಡಿಸಬೇಕಾದ ಹೊಣೆ ಜನಪ್ರತಿನಿಧಿಗಳದು.

ಆದರೆ ಶಿಕ್ಷಣ ಸಂಸ್ಥೆಗಳನ್ನು ತೆರೆದು ಅದನ್ನು ಉದ್ಯಮವಾಗಿ ಮಾಡಿಕೊಂಡಿರುವ ಜನಪ್ರತಿನಿಧಿಗಳಿಂದ ಇಂಥ ಜನಹಿತದ ಕಾರ್ಯಕ್ರಮ ಸಾಧ್ಯವೇ?

■ ಲಕ್ಷ್ಮಣ ಕೊಡಸೆ

